# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **544** |
| ಸದಸ್ಯರ ಹೆಸರು | : | ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 19-07-2024 |
| ಉತ್ತರಿಸುವ ಮಾನ್ಯ ಸಚಿವರು | : | ಕೃಷಿ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯನ್ನು ಯಾವ ವರ್ಷದಿಂದ ಜಾರಿಗೊಳಿಸಲಾಗಿದೆ; ಮತ್ತು ಈ ಯೋಜನೆಯ ಧ್ಯೇಯೋದ್ದೇಶಗಳು ಯಾವುವು; (ಪೂರ್ಣ ಮಾಹಿತಿ ನೀಡುವುದು) | ರಾಜ್ಯದಲ್ಲಿ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ 2016-17ನೇ ಸಾಲಿನಿಂದ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಾಗಿ ಅನುಷ್ಠಾನಗೊಳಿಸಲಾಗುತ್ತಿದೆ.<br><br>ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯ ಪ್ರಮುಖ ಉದ್ದೇಶಗಳು :<br><br>ಅ.ಪ್ರಕೃತಿ ವಿಕೋಪಗಳಿಂದ ಯಾವುದೇ ಅಧಿಸೂಚಿತ ಬೆಳೆ ವಿಫಲವಾದ ಪಕ್ಷದಲ್ಲಿ ರೈತರಿಗೆ ವಿಮಾ ರಕ್ಷಣೆ ಮತ್ತು ಆರ್ಥಿಕ ಬೆಂಬಲ ಒದಗಿಸುವುದು.<br><br>ಆ.ವಿಪತ್ತೊದಗಿದ ವರ್ಷಗಳಲ್ಲಿ ಕೃಷಿ ಆದಾಯ ಸ್ಥಿರವಾಗಿರುವಂತೆ ಮಾಡಲು ನೆರವಾಗುವುದು.<br><br>ಇ. ಪ್ರಕೃತಿ ವಿಕೋಪಗಳಾದ ಆಲೀಕಲ್ಲು ಮಳೆ, ಭೂ ಕುಸಿತ, ಬೆಳೆ ಮುಳುಗಡೆ, ಮೇಘಸ್ಫೋಟ ಮತ್ತು ಗುಡುಗು-ಮಿಂಚುಗಳಿಂದಾಗುವ ಬೆಂಕಿ ಅವಘಡ, ಇತ್ಯಾದಿಗಳಿಂದ ಉಂಟಾಗುವ ನಷ್ಟವನ್ನು ವೈಯುಕ್ತಿಕವಾಗಿ ನಿರ್ಧರಿಸಿ ಬೆಳೆವಿಮಾ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸಿ ರೈತರನ್ನು ರಕ್ಷಿಸುವುದು. |
| ಆ) | ರಾಜ್ಯದಲ್ಲಿ ಫಸಲ್ ಬಿಮಾ ಯೋಜನೆ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅಧ್ಯಯನ ಕೈಗೊಂಡಿವೆಯೇ; ಹಾಗಿದ್ದಲ್ಲಿ, ಈ ಅಧ್ಯಯನದ ಸಾರಾಂಶಗಳು ಯಾವುವು; (ಪೂರ್ಣ ಮಾಹಿತಿ ನೀಡುವುದು) | ಕೇಂದ್ರ ಸರ್ಕಾರದಿಂದ ಫಸಲ್ ಬಿಮಾ ಯೋಜನೆ ಬಗ್ಗೆ ಕೈಗೊಂಡಿರುವ ಅಧ್ಯಯನದ ಪಟ್ಟಿ ಈ ಕೆಳಕಂಡಂತಿದ್ದು, ಪೂರ್ಣ ಮಾಹಿತಿಯನ್ನು ಸಿ.ಡಿ. ಯಲ್ಲಿ ಒದಗಿಸಲಾಗಿದೆ. |

| ಕ್ರ. ಸಂ. | ಅಧ್ಯಯನದ ವಿಷಯ | ವರ್ಷ | ಅಧ್ಯಯನ ಕೈಗೊಂಡ ಸಂಸ್ಥೆ |
|---|---|---|---|
| 1 | Performance Evaluation of Pradhan Mantri Fasal Bima Yojana Governance Analysis (Part1& 2) | 2018, 2019 | Centre for Management in Agriculture (CMA), in Indian Institute of Management, (IIM-A), Ahmedabad |

<table>
<tr><td></td><td></td><td>
<table>
<tr><td>2</td><td>PMFBY Impact Assessment</td><td>2022</td><td>Spectrum Planning (I) Ltd</td></tr>
<tr><td>3</td><td>Study reports on effective implementation of Pradhan Mantri Fasal Bima Yojana (PMFBY)</td><td>2022</td><td>National Rainfed Area Authority, Spectrum Planning (India) Limited</td></tr>
</table>
ರಾಜ್ಯ ಸರ್ಕಾರದಿಂದ ಫಸಲ್ ಬಿಮಾ ಯೋಜನೆ ಬಗ್ಗೆ ಅಧ್ಯಯನ ಕೈಗೊಂಡಿರುವುದಿಲ್ಲ.</td></tr>
<tr><td>ಇ)</td><td>ರಾಜ್ಯದಲ್ಲಿ ಫಸಲ್ ಬಿಮಾ ಯೋಜನೆಯನ್ನು ನಿರ್ವಹಣೆ ಮಾಡುತ್ತಿರುವ ಸರ್ಕಾರಿ ಮತ್ತು ಖಾಸಗಿ ಇನ್ಶೂರೆನ್ಸ್ ಕಂಪನಿಗಳು ಯಾವುವು; ಮತ್ತು ಕಳೆದ ಮೂರು ವರ್ಷಗಳಲ್ಲಿ ಈ ಕಂಪನಿಗಳು ತೊಡಗಿಸಿದ ಪ್ರೀಮಿಯಂ ಮೊತ್ತ ಎಷ್ಟು; ರೈತರಿಗೆ ನೀಡಿದ ಬೆಳೆ ಪರಿಹಾರವೆಷ್ಟು; (ಪೂರ್ಣ ಮಾಹಿತಿ ನೀಡುವುದು)</td><td>2021-22 ರಿಂದ 2023-24 ನೇ ಸಾಲಿನವರೆಗೆ ರಾಜ್ಯದಲ್ಲಿ ಫಸಲ್ ಬಿಮಾ ಯೋಜನೆಯನ್ನು ನಿರ್ವಹಣೆ ಮಾಡುತ್ತಿರುವ ಸರ್ಕಾರಿ ಮತ್ತು ಖಾಸಗಿ ಇನ್ಶೂರೆನ್ಸ್ ಕಂಪನಿಗಳ ಮತ್ತು ಈ ಕಂಪನಿಗಳಿಗೆ ತೊಡಗಿಸಿದ ಪ್ರೀಮಿಯಂ ಮೊತ್ತ ಹಾಗೂ ರೈತರಿಗೆ ನೀಡಿದ ಬೆಳೆ ವಿಮೆ ಪರಿಹಾರ ಮೊತ್ತದ ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ.</td></tr>
<tr><td>ಈ)</td><td>ಫಸಲ್ ಬಿಮಾ ಯೋಜನೆಯನ್ನು ತುಲನಾತ್ಮಕವಾಗಿ ಪರಿಶೀಲಿಸಿದಾಗ ಖಾಸಗಿ ಇನ್ಶೂರೆನ್ಸ್ ಕಂಪನಿಗಳು ಸಾಕಷ್ಟು ಲಾಭಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ನ್ಯೂನ್ಯತೆಯನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವುವು? (ಪೂರ್ಣ ಮಾಹಿತಿ ನೀಡುವುದು)</td><td>ಕೇಂದ್ರ ಸರ್ಕಾರದಿಂದ ಒಟ್ಟು 18 ವಿಮಾ ಸಂಸ್ಥೆಗಳು ಎಂಪ್ಯಾನಲ್ ಆಗಿದ್ದು, ಇದರಲ್ಲಿ ಸರ್ಕಾರ ಸಂಸ್ಥೆ ಹಾಗೂ ಖಾಸಗಿ ಸಂಸ್ಥೆಗಳನ್ನು ಒಳಗೊಂಡಿರುತ್ತದೆ. ಯೋಜನೆ ಅನುಷ್ಠಾನಕ್ಕೆ ವಿಮಾ ಸಂಸ್ಥೆಗಳನ್ನು ಆಯ್ಕೆ ಮಾಡಲು ಟೆಂಡರ್ ಕರೆಯಲಾಗುತ್ತದೆ. ಟೆಂಡರ್ ಪ್ರಕ್ರಿಯೆಯಲ್ಲಿ ಅತೀ ಕಡಿಮೆ ಪ್ರೀಮಿಯಂ ದರಗಳನ್ನು quote ಮಾಡಿರುವ ವಿಮಾ ಸಂಸ್ಥೆಯನ್ನು ಯೋಜನೆ ಅನುಷ್ಠಾನಕ್ಕಾಗಿ ಆಯ್ಕೆ ಮಾಡಲಾಗುತ್ತದೆ.<br><br>ಸದರಿ ಯೋಜನೆಯು ಇಳುವರಿ ಹಾಗೂ ಕ್ಷೇತ್ರ ಆಧಾರಿತ ಯೋಜನೆಯಾಗಿದ್ದು ಮಾರ್ಗಸೂಚಿಯನ್ವಯ ಕ್ಷೇತ್ರ ಮಟ್ಟದಲ್ಲಿ ಬೆಳೆ ಕಟಾವು ಪ್ರಯೋಗಗಳನ್ನು (CCE) ವಿವಿಧ ಇಲಾಖೆಯ ಮೂಲಕಾರ್ಯಕರ್ತರ ಮೂಲಕ Mobile App ನಲ್ಲಿ ಕೈಗೊಳ್ಳುವಾಗ ವಿಮಾ ಸಂಸ್ಥೆಯವರ ಪ್ರತಿನಿಧಿಗಳು ಹಾಗೂ ರೈತರು ಸಹಸಾಕ್ಷಿ ಮತ್ತು ಸಹವೀಕ್ಷಕರಾಗಿದ್ದು, ಇವರೆಲ್ಲರ ಸಮಕ್ಷಮದಲ್ಲಿ ಪಾರದರ್ಶಕವಾಗಿ ಕೈಗೊಳ್ಳಲಾಗುತ್ತದೆ.<br><br>ಬೆಳೆ ಕಟಾವು ಪ್ರಯೋಗಗಳಿಂದ ಬಂದಂತಹ ಅಂತಿಮ ವಾಸ್ತವಿಕ ಇಳುವರಿಯು (ActualYield) ನಿಗದಿಪಡಿಸಲಾದ ಪ್ರಾರಂಭಿಕ ಇಳುವರಿಗಿಂತ (Threshold Yield) ಕಡಿಮೆ ಇದ್ದರೆ,</td></tr>
</table>

| | | |
|---|---|---|
| | | ಇಳುವರಿಯ ಶೇಕಡವಾರು ಕೊರತೆಗೆ ಅನುಗುಣವಾಗಿ ಬೆಳೆ ವಿಮಾ ನಷ್ಟ ಪರಿಹಾರವನ್ನು ಲೆಕ್ಕ ಹಾಕಲಾಗುತ್ತದೆ.<br><br>ಅನುಬಂಧದಲ್ಲಿ ಒದಗಿಸಿರುವ ಪ್ರೀಮಿಯಂ ಮೊತ್ತ ಮತ್ತು ಬೆಳೆ ವಿಮೆ ಇತ್ಯರ್ಥಪಡಿಸಿದ ಮೊತ್ತಕ್ಕೆ ಸಂಬಂಧಿಸಿದಂತೆ, ಖಾಸಗಿ ವಿಮಾ ಕಂಪನಿಯವರು ಲಾಭ ಪಡೆದಿರುವುದು ಕಂಡು ಬಂದಿರುತ್ತದೆ.<br><br>ಆದಕಾರಣ, 2024-25 ನೇ ಸಾಲಿನಲ್ಲಿ ಎಲ್ಲಾ ಅನುಷ್ಠಾನ ವಿಮಾ ಸಂಸ್ಥೆಗಳಿಗೆ (ಸರ್ಕಾರಿ ಹಾಗೂ ಖಾಸಗಿ ಸೇರಿ) ಒಟ್ಟು ಶೇ.20 ರಷ್ಟು ಮಾತ್ರ ಲಾಭವನ್ನು ಸೀಮಿತಗೊಳಿಸುವ ಉದ್ದೇಶದಿಂದ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ 80:110 ಮಾದರಿಯನ್ನು ಆಯ್ಕೆ ಮಾಡಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>**80:110 ಮಾದರಿ:**<br><br>ಈ ಮಾದರಿಯಲ್ಲಿ ಒಂದು ವರ್ಷ ಒಂದು ಹಂಗಾಮಿನಲ್ಲಿ ವಿಮಾ ಸಂಸ್ಥೆಯವರು ಪಡೆದ ಒಟ್ಟು ವಿಮಾ ಕಂತಿನ ಮೊತ್ತ ಹಾಗೂ ಇತ್ಯರ್ಥಪಡಿಸಿದ ವಿಮಾ ಪರಿಹಾರ ಮೊತ್ತದ ಅನುಪಾತದಲ್ಲಿ ಶೇಕಡ 80 ಕ್ಕಿಂತ ಕಡಿಮೆ ಇದ್ದಾಗ ವಿಮಾ ಸಂಸ್ಥೆಯವರು ಹೆಚ್ಚುವರಿ ಮೊತ್ತವನ್ನು ರಾಜ್ಯ ಸರ್ಕಾರಕ್ಕೆ ಹಿಂದಿರುಗಿಸಬೇಕಾಗುತ್ತದೆ. ಅಂದರೆ, ವಿಮಾ ಸಂಸ್ಥೆಯವರು ಶೇ. 20 ರಷ್ಟು ಮಾತ್ರ ಲಾಭಾಂಶವನ್ನು ಹೊಂದಲು ಅವಕಾಶವಿರುತ್ತದೆ. ಶೇ.110 ಕ್ಕಿಂತ ಹೆಚ್ಚು ಇದ್ದಾಗ ರಾಜ್ಯ ಸರ್ಕಾರವು ವಿಮಾ ಸಂಸ್ಥೆಯವರಿಗೆ ನೀಡಬೇಕಾಗುತ್ತದೆ. ಅಂದರೆ, ವಿಮಾ ಸಂಸ್ಥೆಯವರು ಶೇ.110 ರವರೆಗೆ ಮಾತ್ರ ನಷ್ಟದ ಹೊರೆಯನ್ನು ಹೊಂದುತ್ತವೆ. ಸದರಿ ಮಾದರಿಯಲ್ಲಿ ಲಾಭ/ನಷ್ಟ ಸಂಪೂರ್ಣ ರಾಜ್ಯ ಸರ್ಕಾರದ್ದಾಗಿರುತ್ತದೆ. |

*ಕೃ ಇ 69 ಎಎಂಎಸ್ 2024*

**(ಎನ್. ಚಲುವರಾಯಸ್ವಾಮಿ)**

ಕೃಷಿ ಸಚಿವರು

## ಅನುಬಂಧ

**2021-22 ರಿಂದ 2023-24 ರವರೆಗೆ ಪ್ರಧಾನಮಂತ್ರಿ ಫಸಲ್ ಬಿಮಾ (ವಿಮಾ) ಯೋಜನೆಯಡಿ ವರ್ಷವಾರು ಪಾವತಿಯಾದ ಒಟ್ಟು ವಿಮಾ ಪ್ರೀಮಿಯಂ ಮೊತ್ತ ಹಾಗೂ ಬೆಳೆ ವಿಮಾ ಪರಿಹಾರ ಮೊತ್ತದ ವಿವರ (ಮೊತ್ತ ರೂ. ಲಕ್ಷಗಳಲ್ಲಿ)**

| 2021-22 | | |
|---|---|---|
| ವಿಮಾ ಸಂಸ್ಥೆ | ಒಟ್ಟು ವಿಮಾ ಪ್ರೀಮಿಯಂ ಮೊತ್ತ | ಒಟ್ಟು ಬೆಳೆ ವಿಮಾ ಪರಿಹಾರ ಮೊತ್ತ |
| **ಸರಕಾರಿ ವಿಮಾ ಸಂಸ್ಥೆ** | | |
| ಅಗ್ರಿಕಲ್ಚರ್ ಇನ್ಶೂರೆನ್ಸ್ ಕಂಪನಿ | 34310.86 | 24567.73 |
| **ಖಾಸಗಿ ವಿಮಾ ಸಂಸ್ಥೆಗಳು** | | |
| ಬಜಾಜ್ ಅಲಿಯಾನ್ಸ್ ಜನರಲ್ ಇನ್ಶೂರೆನ್ಸ್ ಕಂಪನಿ | 28478.91 | 14421.96 |
| ಐ.ಸಿಐಸಿಐ ಲೊಂಬಾರ್ಡ | 20034.91 | 9243.89 |
| ಫ್ಯೂಚರ್ ಜನರಲಿ ಇನ್ಶುರೆನ್ಸ್ ಕಂಪನಿ | 28714.60 | 14537.01 |
| ಯುನಿವರ್ಸಲ್ ಸೊಂಪೊ ಜನರಲ್ ಇನ್ಶುರೆನ್ಸ್ ಕಂಪನಿ | 36826.10 | 24801.42 |
| **ಒಟ್ಟು** | **114054.52** | **63004.28** |
| **ಮಹಾ ಒಟ್ಟು** | **148365.39** | **87572.01** |

| 2022-23 | | |
|---|---|---|
| ವಿಮಾ ಸಂಸ್ಥೆ | ಒಟ್ಟು ವಿಮಾ ಪ್ರೀಮಿಯಂ ಮೊತ್ತ | ಒಟ್ಟು ಬೆಳೆ ವಿಮಾ ಪರಿಹಾರ ಮೊತ್ತ |
| **ಸರಕಾರಿ ವಿಮಾ ಸಂಸ್ಥೆ** | | |
| ಅಗ್ರಿಕಲ್ಚರ್ ಇನ್ಶೂರೆನ್ಸ್ ಕಂಪನಿ | 52602.16 | 67374.14 |
| **ಖಾಸಗಿ ವಿಮಾ ಸಂಸ್ಥೆಗಳು** | | |
| ಬಜಾಜ್ ಅಲಿಯಾನ್ಸ್ ಜನರಲ್ ಇನ್ಶೂರೆನ್ಸ್ ಕಂಪನಿ | 30812.80 | 16491.59 |
| ಐ.ಸಿಐಸಿಐ ಲೊಂಬಾರ್ಡ | 19110.61 | 8040.84 |
| ಫ್ಯೂಚರ್ ಜನರಲಿ ಇನ್ಶುರೆನ್ಸ್ ಕಂಪನಿ | 33194.93 | 15594.81 |
| ಯುನಿವರ್ಸಲ್ ಸೊಂಪೊ ಜನರಲ್ ಇನ್ಶುರೆನ್ಸ್ ಕಂಪನಿ | 57101.45 | 28179.45 |
| **ಒಟ್ಟು** | **140219.78** | **68306.69** |

| | | |
|---|---|---|
| **ಮಹಾ ಒಟ್ಟು** | **192821.94** | **135680.83** |

| **2023-24 *** | | |
|---|---|---|
| **ವಿಮಾ ಸಂಸ್ಥೆ** | **ಒಟ್ಟು ವಿಮಾ ಪ್ರೀಮಿಯಂ ಮೊತ್ತ** | **ಒಟ್ಟು ಬೆಳೆ ವಿಮಾ ಪರಿಹಾರ ಮೊತ್ತ** |
| **ಸರಕಾರಿ ವಿಮಾ ಸಂಸ್ಥೆ** | | |
| ಅಗ್ರಿಕಲ್ಚರ್ ಇನ್ಶೂರೆನ್ಸ್ ಕಂಪನಿ | 44519.12 | 69320.76 |
| **ಖಾಸಗಿ ವಿಮಾ ಸಂಸ್ಥೆಗಳು** | | |
| ಬಜಾಜ್ ಅಲಿಯಾನ್ಸ್ ಜನರಲ್ ಇನ್ಶೂರೆನ್ಸ್ ಕಂಪನಿ | 33597.89 | 41491.41 |
| ಫ್ಯೂಚರ್ ಜನರಲಿ ಇನ್ಶುರೆನ್ಸ್ ಕಂಪನಿ | 13617.01 | 9776.45 |
| ರಿಲಯನ್ಸ್ ಜನರಲ್ ಇನ್ಶೂರೆನ್ಸ್ ಕಂಪನಿ | 33316.52 | 21394.30 |
| ಎಸ್.ಬಿ.ಐ ಜನರಲ್ ಇನ್ಶೂರೆನ್ಸ್ ಕಂಪನಿ | 29598.68 | 21818.94 |
| ಯುನಿವರ್ಸಲ್ ಸೊಂಪೊ ಜನರಲ್ ಇನ್ಶುರೆನ್ಸ್ ಕಂಪನಿ | 38688.68 | 33236.95 |
| **ಒಟ್ಟು** | **148818.78** | **127718.05** |
| **ಮಹಾ ಒಟ್ಟು** | **193337.90** | **197038.81** |

* 2023-24 ನೇ ಸಾಲಿನ ಅಂತಿಮ ಪರಿಹಾರ ಲೆಕ್ಕಹಾಕುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ